

ಡಾ. ನಾಗರಾಜು ಜಿ.ಬಿ, ಭೈರೇನಹಳ್ಳಿ
ಕಲೆ: ಎಸ್.ವಿ.ಹೂಗಾರ್

# ರೂಬಿಕ್ಸ್ ಕ್ಯೂಬ್

ಬೆಂಗಳೂರಿನಲ್ಲಿ ಸಂಜೆಯ ವೇಳೆ ಮೋಡವಾದರೆ ಸಾಕು, ಮಳೆ ಗ್ಯಾರಂಟಿ ಮತ್ತು ಸಂಜೆಯ ಮಳೆ ಮಧ್ಯರಾತ್ರಿಯಾದರೂ ಜಿನುಗುತ್ತಿರುತ್ತದೆ, ಬೇಗ ನಿಲ್ಲುವುದಿಲ್ಲ. ಸಂಜೆಯಾಗುವವರೆಗೂ ಮಳೆಯಾಗುವ ಯಾವ ಲಕ್ಷಣಗಳೂ ಇಲ್ಲದೆ ನಿರ್ಮಲವಾಗಿದ್ದ ಆಕಾಶದಲ್ಲಿ ಅಲ್ಲೊಂದು ಇಲ್ಲೊಂದು ಹತ್ತಿಯ ಉಂಡೆಯಂತೆ ದೂರದೂರದಲ್ಲಿ ಚದುರಿದ್ದ ಮೋಡಗಳು, ಸಂಜೆಯಾಗತೊಡಗಿದಂತೆ ಪರಸ್ಪರ ಏನೋ ಮಾತನಾಡಲು ಸೇರುವ ಸ್ನೇಹಿತರಂತೆ ಒಟ್ಟಿಗೆ ಸೇರಿ, ಕತ್ತಲಾಗತೊಡಗಿದಂತೆ ಮತ್ತಷ್ಟು ಕಪ್ಪಾಗುತ್ತಾ, ದಟ್ಟವಾಗುತ್ತಾ, ಇದ್ದಕ್ಕಿದ್ದಂತೆ ಮಾತುಕತೆಯಲ್ಲಿ ಭಿನ್ನಾಭಿಪ್ರಾಯವಾಗಿ ಪರಸ್ಪರ ವಾಗ್ವಾದವಾಗುವಂತೆ ಗುಡುಗು ಸಿಡಿಲು ಮಿಂಚುಗಳಿಂದ ಹೂಂಕರಿಸುತ್ತಾ, ಕೊನೆಗೆ ಜಗಳ ಕಣ್ಣೀರಲ್ಲಿ ಮುಕ್ತಾಯವಾಗುವಂತೆ ಭೋರ್ಗರೆಯುತ್ತಾ ಮಳೆ ಸುರಿಯತೊಡಗಿತು.

ನೂಕು ಗಾಡಿಯಲ್ಲಿ ಹಣ್ಣು ಮಾರುತ್ತಾ, ಬೆಳಗಿನಿಂದ ಚೆನ್ನಾಗಿ ವ್ಯಾಪಾರವಾಗಿದ್ದ ಖುಷಿಯಲ್ಲಿ, ತುಂಬಿದ ಗಲ್ಲಾಪೆಟ್ಟಿಗೆಯ ಮೇಲೆ ಕಣ್ಣಿಟ್ಟಿದ್ದ ಶ್ರೀಕಂಠನಿಗೆ ತಲೆ ಎತ್ತಿ ಆಗಸದ ಕಡೆ ಕಣ್ಣು ಹಾಯಿಸುವಷ್ಟು ವ್ಯವಧಾನವಿಲ್ಲದ್ದರಿಂದ, ಮೇಲೆ ಮೋಡವಾಗಿದ್ದಾಗಲೀ, ನಿಧಾನವಾಗಿ ದಟ್ಟವಾಗುತ್ತಾ ಹೋದದ್ದಾಗಲೀ ಅರಿವಿಗೆ ಬಾರದೆ, ತಲೆಯ ಮೇಲೆ ಹನಿಗಳು ಬೀಳತೊಡಗಿದ ಮೇಲೆ ತಕ್ಷಣ ಎಚ್ಚರವಾದವನಂತೆ ತಲೆ ಎತ್ತಿ ನೋಡಿ, ಆಗಲೇ ಕರಿಯ ಮೋಡಗಳು ನೆತ್ತಿಯ ಮೇಲೆ ಜೇನುಗೂಡು ಕಟ್ಟಿದ್ದನ್ನು ಕಂಡು, "ಥೂತ್ತೇರಿಕೇ, ಮಳೇಲಿ ಸಿಗಾಕಿಕೊಂಡೆನಲ್ಲ!" ಎಂದು ತನ್ನ ಮೈಮರೆವಿಗೆ ತನ್ನನ್ನು ತಾನೇ ಶಪಿಸುತ್ತಾ, ಹತ್ತಿರದಲ್ಲಿ ಮಳೆಯಿಂದ ರಕ್ಷಣೆ ಪಡೆಯಲು ಆಶ್ರಯ ಹುಡುಕುವಷ್ಟರಲ್ಲಿ ಲೇಟಾಗಿತ್ತು. ಆಗಲೇ ಮಳೆ ಒಂದನೇ ಗೇರಿನಿಂದ ನೇರವಾಗಿ ನಾಲ್ಕನೇ ಗೇರಿಗೆ ಶಿಫ್ಟ್ ಆಗಿ, ರಪರಪನೆ

